**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ತುಮಕೂರು-ಮಧುಗಿರಿ**

**ಎಸ್.ಸಿ.ಸಂಖ್ಯೆ:** 5037/2023 ಫ್ರಾಸಾ-07
ಚಾಸಾ-08

ದಿನಾಂಕಃ 01-12-2025

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-</u>**

ಸಾಕ್ಷ್ಯ ಹೇಳಲು ಸಮರ್ಥ ಮತ್ತು ತಿಳವಳಿಕೆ ಇರುತ್ತದೆಯೇ ಎಂಬುದವರ ಬಗ್ಗೆ ತಿಳಿದುಕೊಳ್ಳಲು ಈ ಕೆಳಗಿನ ಪ್ರಶ್ನೆಗಳನ್ನು ಕೇಳಲಾಯಿತು.

**1. ನಿಮ್ಮ ಶಾಲೆಯ ಹೆಸರು ಏನು ?**

ಉತ್ತರಃ ಬೂದಿಬೆಟ್ಟದ ಸರ್ಕಾರಿ ಶಾಲೆ

**2. ನಿಮ್ಮ ತರಗತಿಯಲ್ಲಿ ಒಟ್ಟು ಎಷ್ಟು ಜನ ಇರುತ್ತಾರೆ?**

ಉತ್ತರಃ 24 ಜನ ಇರುತ್ತಾರೆ.

**3. ಯಾವ ಮಧ್ಯಮದಲ್ಲಿ ವ್ಯಾಸಾಂಗ ಮಾಡುತ್ತಿದ್ದೀರಿ?**

ಉತ್ತರಃ ಕನ್ನಡ ಮಾಧ್ಯಮದಲ್ಲಿ

**4. ಈ ಸ್ಥಳವನ್ನು ಏನೆಂದು ಹೇಳುತ್ತಾರೆ?**

ಉತ್ತರಃ ಕೊರ್ಟ್

**5. ಇಲ್ಲಿಗೆ ಏಕೆ ಬಂದಿದ್ದಿಯಾ ?**

ಉತ್ತರಃ ನ್ಯಾಯಾಲಯದಲ್ಲಿ ಸತ್ಯ ಹೇಳಲು ಬಂದಿದ್ದೇನೆ.

**ಸಾಕ್ಷಿ 11 ವರ್ಷದವನು ಆಗಿದ್ದು ಸಾಮಾನ್ಯ ತಿಳುವಳಿಕೆ ಇರುವಂತೆ ಕಂಡು ಬಂದಿರುತ್ತದೆ ಮತ್ತು ಸಾಕ್ಷ್ಯ ಹೇಳಲು ಸಮರ್ಥನಾಗಿದ್ದಾನೆ.**

**ಚಾಸಾ-08**

| | |
|---|---|
| **ಹೆಸರು** | ಮಹೀದರ್ |
| **ತಂದೆಯ ಹೆಸರು** | ರಾಮಾಂಜಿ |
| **ವಯಸ್ಸು** | 11 |
| **ಉದ್ಯೋಗ** | 5 ನೇ ತರಗತಿ |
| **ವಾಸಸ್ಥಳ** | ಬೂದಿಬೆಟ್ಟ |

ಚಾಸಾ-9 ನನ್ನ ತಮ್ಮ, ನನ್ನ ತಾಯಿ ಹೆಸರು ಲಕ್ಷ್ಮೀ, ನನ್ನ ತಂದೆ ಹೆಸರು ರಾಮಾಂಜಿ. ನಾವು ಬೂದಿಬೆಟ್ಟದ ನಮ್ಮ ಮನೆಯಲ್ಲಿ ನಾನು, ನನ್ನ ತಮ್ಮ, ನನ್ನ ತಂದೆ, ತಾಯಿ ವಾಸ ಮಾಡುತ್ತಿದ್ದೇವು. ನಾನು ಬೆಳಿಗ್ಗೆ 9-00 ಗಂಟೆಗೆ ಶಾಲೆಗೆ ಹೋಗಿ 4-00 ಗಂಟೆಗೆ ವಾಪಸ್ಸು ಬರುತ್ತೇನೆ. ನನ್ನ ತಂದೆ ಅಡಿಗೆ ಬಟ್ಟರ ಕೆಲಸ ಮಾಡುತ್ತಿದ್ದರು. ನನ್ನ ತಾಯಿ ಮನೆಯಲ್ಲಿ ಇರುತ್ತಿದ್ದಳು. ನನ್ನ ತಂದೆ ತಾಯಿ ಇಬ್ಬರು ಚೆನ್ನಾಗಿದ್ದರು. ನನ್ನ ತಾಯಿ ಈಗ ಜೀವಂತ ಇರುವುದಿಲ್ಲ ಮೃತಪಟ್ಟಿರುತ್ತಾಳೆ. ನಮ್ಮ ಅಮ್ಮನ ಕೊಲೆ ಆಗಿರುತ್ತದೆ , ನನ್ನ ಅಮ್ಮನನ್ನು ಯಾರು ಕೊಲೆ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ನಮ್ಮ ಅಮ್ಮನ ಶವವನ್ನು ನಮ್ಮ ಮನೆಯ ಬಾಗಿಲ ಹೊರಗಡೆ ನೋಡಿರುತ್ತೇನೆ. ನಮ್ಮ ಅಮ್ಮನ ತಲೆಗೆ ಗಾಯವಾಗಿ ರಕ್ತ ಬರುತ್ತಿತ್ತು. ನಾನು , ನನ್ನ ತಮ್ಮ ನನ್ನ ಅತ್ತೆ ಲಕ್ಷ್ಮೀ ಶವವನ್ನು ಬೆಳಿಗ್ಗೆ 9-30 ಗಂಟೆಗೆ ನೋಡಿರುತ್ತೇವೆ. ನಾನು 3 ನೇ ತರಗತಿ ಇದ್ದಾಗ ನನ್ನ ತಾಯಿ ತೀರಿಕೊಂಡಿರುತ್ತಾಳೆ.

ರಾತ್ರಿ ನಾನು , ನನ್ನ ತಮ್ಮ ಮತ್ತು ನನ್ನ ಅಪ್ಪ ಅಮ್ಮನ ಜೊತೆ ಮಲಗಿಕೊಂಡಿರುತ್ತೇವೆ. ಬೆಳಿಗ್ಗೆ 7-30 ಗಂಟೆಗೆ ಎದ್ದಿರುತ್ತೇನೆ. ಹೊರಗಡೆ ಬಂದಾಗ ನನ್ನ ಅತ್ತೆ ಲಕ್ಷ್ಮೀ ಇದ್ದಳು ನನ್ನ ಅಪ್ಪ ಮನೆಯಲ್ಲಿ ಇರಲಿಲ್ಲ. ನನ್ನ ಅತ್ತೆ, ನನ್ನ ಅಪ್ಪ ಜೈಲಲ್ಲಿ ಇದ್ದಾರೆಂದು ಹೇಳಿರುತ್ತಾರೆ. ನನ್ನ ಅಮ್ಮನ ಮೇಲೆ ಬೇರೆ ಯಾರಿಗಾದರೂ ದ್ವೇಷ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಮದ್ಯಾಹ್ನ ನನ್ನ ಅಮ್ಮನನ್ನು ಮಣ್ಣು ಮಾಡಿರುತ್ತಾರೆ, ಆ ಸಮಯದಲ್ಲಿ ನನ್ನ ತಂದೆ ಇರಲಿಲ್ಲ. ನಾನು ಈ ನನ್ನ ತಂದೆಯ ತಾಯಿ ಹತ್ತಿರ ವಾಸ ಮಾಡುತ್ತೇನೆ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**<u>ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-</u>**

ನನ್ನ ಅಮ್ಮನ ಹತ್ತಿರ ಮೊಬೈಲ್ ಇರಲಿಲ್ಲ ಪಕ್ಕದ ಮನೆಯವರ ಹತ್ತಿರ ಫೋನ್ ಮಾತನಾಡುತ್ತಿದ್ದರು. ನನ್ನ ಅಮ್ಮ ಸುಮಾರು ಸಾರಿ ಮೊಬೈಲ್ ನಲ್ಲಿ ಮಾತನಾಡುತ್ತಿದ್ದರು. ನನ್ನ ಅಮ್ಮ ಅರ್ಧ ಗಂಟೆ ಮೊಬೈಲ್ ನಲ್ಲಿ ಪಕ್ಕದ ಮನೆಗೆ ಹೋಗಿ ಮಾತನಾಡುತ್ತಿದ್ದಳು. ಯಾರ ಜೊತೆ ಮೊಬೈಲ್ ನಲ್ಲಿ ಮಾತನಾಡುತ್ತಿಯಾ ಎಂದು ನಾನು ನನ್ನ ತಾಯಿಯನ್ನ ಕೇಳಲಿಲ್ಲ. ನನ್ನ ತಂದೆ ನನ್ನ ತಾಯಿಯ ಯಾವಾಗಲೂ ಫೋನ್ ಮಾಡಿ ಬೇರೆಯವರ ಜೊತೆ ಮಾತನಾಡುತ್ತಾಳೆಂದು ಹೊಡೆಯುತ್ತಿದ್ದ ಎಂದರೆ ನಾನು ನೋಡಿರುವುದಿಲ್ಲ. ಚಾಸಾ-7 ಮತ್ತು 15 ರವರು ಆರೋಪಿಗೆ ಬುದ್ದಿವಾದ ಹೇಳಿದ್ದರು ಎಂದರೆ ನಾನು ನೋಡಿರುವುದಿಲ್ಲ. ರಾತ್ರಿ 10-45 ಗಂಟೆಗೆ ನಾನು ನನ್ನ ತಮ್ಮ ಮೊಬೈಲ್ ನೋಡುತ್ತಾ ಮಂಚದ ಮೇಲೆ ಮಲಗಿದ್ದೇವು ಆ ಸಮಯದಲ್ಲಿ ನನ್ನ ಅಪ್ಪ ನನ್ನ ಅಮ್ಮನ ಮೇಲೆ ಗಲಾಟೆ ಮಾಡಿ ಹೊಡೆಯುತ್ತಿದ್ದ ನಂತರ ಒಣಕೆ ತೆಗೆದುಕೊಂಡು ಬಂದು ನನ್ನ ಅಮ್ಮನ ತಲೆಗೆ ಹೊಡೆದ ತಲೆಯಲ್ಲಿ ರಕ್ತ ಬಂದು ನನ್ನ ಅಮ್ಮ ಬಿದ್ದು ಸತ್ತು ಹೋದಳು ಎಂದರೆ ನನಗೆ ಏನೂ ಗೊತ್ತಿಲ್ಲ. ಆ ಮೇಲೆ ನನ್ನ ಅಪ್ಪ ಚಾಕುವಿನಿಂದ ಕೈ ಕೊಯ್ದುಕೊಂಡನು ಎಂದರೆ ನನಗೆ ಗೊತ್ತಿಲ್ಲ. ನನಗೆ ಭಯವಾಗಿ ಮನೆಯ ಒಳಗೆ ಇದ್ದ ಸ್ವಲ್ಪ0 ಹೊತ್ತ ನಂತರ ನನ್ನ ತಂದೆ ಎಲ್ಲಿಗೋ ಹೊರಟುಹೋದ ಎಂದರೆ ನನಗೆ ಗೊತ್ತಿಲ್ಲ. ನಂತರ ನನ್ನ ಅತ್ತೆ ಲಕ್ಷ್ಮೀ ಬಂದಿರುತ್ತಾರೆ ಎಂದರೆ ಬೆಳಿಗ್ಗೆ ಅವರನ್ನು ನೋಡಿರುತ್ತೇನೆ. ಪೊಲೀಸರ ಮುಂದೆ ನಾನು ನನ್ನ ಅಪ್ಪನೇ ಒಣಕೆಯಿಂದ ನನ್ನ ಅಮ್ಮನಿಗೆ ತಲೆ ಮೇಲೆ ಹೊಡೆದಿರುತ್ತಾನೆ ನನ್ನ ಅಮ್ಮ ಸತ್ತು ಹೋಗಿರುತ್ತಾಳೆಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಈ ಓದಿ ಹೇಳಿದ ಹೇಳಿಕೆಯನ್ನು ನಿಪಿ-12 ಎಂದು ಗುರುತಿಸಲಾಯಿತು.

ಈ ದಿನ ನನ್ನನ್ನು ನ್ಯಾಯಾಲಯಕ್ಕೆ ನನ್ನ ಅತ್ತೆ ಲಕ್ಷ್ಮೀದೇವಿ ಕರೆದುಕೊಂಡು ಬಂದಿರುತ್ತಾರೆ. ನನ್ನ ಅತ್ತೆ ನನಗೆ ಯಾವುದೇ ವಿಷಯ ಹೇಳಿಕೊಟ್ಟು ಈ ದಿನ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುವುದಿಲ್ಲ. ವಿ.ಸಿ.ಯಲ್ಲಿ ಕಾಣುತ್ತಿರುವುದು ನನ್ನ ತಂದೆ. ನನ್ನ ತಂದೆಗೆ ಸಹಾಯ ಮಾಡಲು ಎಂದು ನಾನು ಎಲ್ಲಾ ವಿಚಾರ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲು,ಶ್ರೀ. ಪಿ.ಎನ್.ಆರ್. ವಕೀಲರಿಂದ ಆರೋಪಿ ಪರವಾಗಿಃ-</u>**

ನಮ್ಮ ಮನೆ ಮುಂದೆ ಚೂಪಾದ ಕಲ್ಲುಗಳು ಇರುತ್ತವೆ ಎಂದರೆ ನಿಜ. ನನ್ನ ಅಮ್ಮ ತಲೆ ತಿರುಗಿ ಕಲ್ಲು ಮೇಲೆ ಬಿದ್ದಿರುತ್ತಾಳೆ ಎಂದರೆ ನಾನು ನೋಡಿರುವುದಿಲ್ಲ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ತುಮಕೂರು-ಮಧುಗಿರಿ.**